ಅನಿರೀಕ್ಷಿತವಾಗಿದ್ದ ಈ ಸ್ವೀಕಾರ ತಾನು ಅವರೆಗೆ ಕಂಡಿದ್ದೆಲ್ಲ ಕಥೆಯಾಗಬಹುದು ಎಂಬ ವಿಚಿತ್ರ ಆತ್ಮ ವಿಶ್ವಾಸವನ್ನು ಕಥೆಗಾರನಿಗೆ ಕೊಟ್ಟಿತು. ಘಟನಾವಳಿ, ಪಾತ್ರಗಳು ಬಂದು ಬಂದು ಬರೆಸತೊಡಗಿದವು. ಅಷ್ಟೊತ್ತಿಗಾಗಲೇ ದಲಿತ ಸಾಹಿತ್ಯ ಹಾಗೂ ಬಂಡಾಯ ಸಾಹಿತ್ಯಗಳು ರೂಪಿಸಿದ್ದ ಕಥಾಮೀಮಾಂಸೆ, ಕಥಾ ವಿಮರ್ಶೆಗಳು ಕೂಡ ಈ ಕಥೆಗಳ ಸ್ಥಾನವನ್ನು ಗಟ್ಟಿಗೊಳಿಸಿದವು. ಈ ಎರಡೂ ಮಾರ್ಗಗಳ ಪರಿಚಿತ ಹಾದಿ ಬಿಟ್ಟು ಕೂಡ ಮೊಗಳ್ಳಿ ಕಥೆಗಳು ಚಲಿಸಲಾರಂಭಿಸಿದವು.

2

ಹದಿಹರೆಯದಲ್ಲಿ ತನ್ನನ್ನು ಜೀತಕ್ಕಿರಿಸಲು ಹೊರಟಿದ್ದ ಕಡುಕ್ರೂರಿ ಅಪ್ಪನ ಹಿಡಿತದಿಂದ ತಪ್ಪಿಸಿಕೊಂಡು ರಾಮನಗರ ತಾಲೂಕಿನ ಸಂತೇ ಮೊಗೇನಹಳ್ಳಿಯನ್ನು ಬಿಟ್ಟ ಮೊಗಳ್ಳಿ ಗಣೇಶ್ (1962-2025) ತನ್ನ ಬದುಕಿನುದ್ದಕ್ಕೂ ಹಲ ಬಗೆಯ ಜೀತಗಳಿಂದ ತಪ್ಪಿಸಿಕೊಳ್ಳಲು ಯತ್ನಿಸಿದಂತೆ ಕಾಣುತ್ತದೆ. ತಾನು ಬಿಟ್ಟು ಬಂದ ಊರಿನ ಆಡು ರೂಪವಾದ 'ಮೊಗಳ್ಳಿ'ಯನ್ನು ತನ್ನ ಹೆಸರಿಗೆ ಸೇರಿಸಿ ಕೊಂಡು ಬರೆಯತೊಡಗಿದ ಮೊಗಳ್ಳಿ ಗಣೇಶ್ ಹೊಸ ತಲೆಮಾರಿನ ಬುದ್ಧಿಜೀವಿಯಾಗಿಯೂ ಅರಳತೊಡಗಿದ. ಹಾದಿಬೀದಿಗಳಲ್ಲೇ ಬೆಳೆಯುವ ಹಳ್ಳಿಹೈದರ ದಟ್ಟ ಅನುಭವಕ್ಕೆ ನಗರ ಎಂಥೆಂಥ ಆಧುನಿಕ ತಾತ್ವಿಕತೆಗಳನ್ನು ಕೊಡಬಲ್ಲದು ಎಂಬ ಸಾಮಾಜಿಕ- ಸಾಂಸ್ಕೃತಿಕ ವಿದ್ಯಮಾನವನ್ನು ಕೂಡ ಲೇಖಕನಾಗಿ ಮೊಗಳ್ಳಿ ಗಣೇಶ್ ಪಡೆದ ವಿಕಾಸ ಸೂಚಿಸುತ್ತದೆ. ಊರು ಬಿಟ್ಟು ಮೈಸೂರು ಬಿದ್ದ ಮೇಲೆ ಹಲಬಗೆಯ ವಾದಗಳು, ಚಳವಳಿಗಳು, ಸಿದ್ಧಾಂತಗಳು ಮೊಗಳ್ಳಿಯನ್ನು ಕರೆದವು: ಮಾರ್ಕ್ಸ್‌ವಾದ, ನಕ್ಸಲ್‌ವಾದ, ಕಮ್ಯುನಿಸಂ, ದಲಿತ ಚಳವಳಿ, ಅಂಬೇಡ್ಕರ್‌ವಾದ, ರೈತ ಚಳವಳಿ; ಕೆ. ರಾಮದಾಸ್, ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಸಾಕೇತ್‌ರಾಜನ್... ಹೀಗೆ ಚಳವಳಿಗಳು, ವ್ಯಕ್ತಿಗಳು, ವಾದಗಳು ಮೊಗಳ್ಳಿಯನ್ನು ಸೆಳೆದವು. ಇವೆಲ್ಲದರಿಂದಲೂ ಮೊಗಳ್ಳಿಯ ಹೊಸ ಪ್ರಜ್ಞೆ ರೂಪುಗೊಳ್ಳತೊಡಗಿತು. ಸಾಮಾನ್ಯ ಅಳತೆಗೋಲಿನಲ್ಲಿ ಅಳೆಯುವವರ ಪ್ರಕಾರ ಕೊಂಚ ಹೆಚ್ಚೇ ಎನ್ನಬಹುದಾದ ಸ್ವಾಭಿಮಾನ ಹಾಗೂ ಹಠಾತ್ತನೆ ಚಿಮ್ಮುವ 'ಡೋಂಟ್ ಕೇರ್' ಧೋರಣೆಗಳ ತರುಣ ಮೊಗಳ್ಳಿ ಚಿನ್ನದ ಪದಕಗಳೊಂದಿಗೆ ಜಾನಪದ ಎಂ.ಎ. ಹಾಗೂ ಅದಕ್ಕೂ ಮೊದಲು ತನಗೆ ಹೆಚ್ಚು ಒಗ್ಗದ ಎಕನಾಮಿಕ್ಸ್ ಎಂ.ಎ. ಮುಗಿಸಿದ್ದರೂ, ಹಲ ವರ್ಷ ಕಾಲ ಉದ್ಯೋಗವಿಲ್ಲದೆ ಅಲೆದಾಡಬೇಕಾಯಿತು.

ಮೊಗಳ್ಳಿಯ ಆರಂಭದ ಕಥೆಗಳಲ್ಲಿದ್ದ ಅಪರೂಪದ ಕಂಪನಗಳನ್ನು ಕಂಡ ಅನನ್ಯ ಕಥೆಗಾರ ಪಿ. ಲಂಕೇಶ್ 1991ರಲ್ಲಿ ಮೊಗಳ್ಳಿಯ ಉಳಿದ ಕಥೆಗಳನ್ನೂ ತರಿಸಿಕೊಂಡು ಓದಿ, ತಮ್ಮ ಪತ್ರಿಕೆ ಪ್ರಕಾಶನದಿಂದ 1992ರಲ್ಲಿ 'ಬುಗುರಿ' ಕಥಾಸಂಕಲನವನ್ನು ಪ್ರಕಟಿಸಿದರು. 'ಬುಗುರಿ' ಸಂಕಲನ ಮೊಗಳ್ಳಿಯ ಸ್ಥಾನವನ್ನು ಕನ್ನಡ ಕಥಾಲೋಕದಲ್ಲಿ ನೆಲೆಗೊಳಿಸಿತು. ಇದಾದ ನಂತರ ಲಂಕೇಶ್ ತಮ್ಮ ಪತ್ರಿಕೆಯಲ್ಲಿ ಪುಸ್ತಕ ವಿಮರ್ಶೆ ಬರೆಯಲು ಕೂಡ ಮೊಗಳ್ಳಿಗೆ ಹೇಳಿದರು. ಆಗ ಕಥೆಗಾರ, ಪ್ರಬಂಧಕಾರನಾಗಿದ್ದ ಗಣೇಶ್ ತಾನು ವಿಮರ್ಶೆಗೆ ಕೈಗೆತ್ತಿಕೊಂಡಿದ್ದ ಕೃತಿಗಳ ಗುಣ, ದೋಷಗಳ ಬಗ್ಗೆ ಕೆಲವೊಮ್ಮೆ ಸರಿಯಾದ ಪ್ರಶ್ನೆಗಳನ್ನು ಎತ್ತುತ್ತಿದ್ದುದು ನಿಜ. ಆದರೆ ವಿಮರ್ಶೆಯಲ್ಲಿ ನಮ್ಮ ಆಳದ, ಒಳಗಿನ ಗ್ರಹಿಕೆ ಮುಖ್ಯವಾದರೂ ಬಳಸುವ ವಿಮರ್ಶಾ ಮಾರ್ಗ ಕೂಡ ಅಷ್ಟೇ ಮುಖ್ಯ. ಹ್ಯಾಮ್ಲೆಟ್ ಹುಚ್ಚು ಕುರಿತು ಪೊಲೋನಿಯಸ್ ಹೇಳಿದಂತೆ, 'ಇದು ಹುಚ್ಚಾದರೂ ಅದರಲ್ಲೂ ಒಂದು ಕ್ರಮವಿದೆ' ಎನ್ನಿಸುತ್ತಿದ್ದುದು ನಿಜ! ಆದರೆ ವಿಮರ್ಶಾ ಮಾರ್ಗಗಳ ಒಂದು ಮಟ್ಟದ ತರಬೇತಿಯಾದರೂ ಇಲ್ಲದ ತೀಕ್ಷ್ಣ ಅನಿಸಿಕೆಗಳ ಈ ವಿಮರ್ಶೆ ಬಹುಕಾಲ ಮುಂದುವರಿಯುವುದು ಕಷ್ಟವಿತ್ತು.

3

ಸಾಮಾನ್ಯವಾಗಿ ಮೊಗಳ್ಳಿಯ ಬರವಣಿಗೆಯಲ್ಲಿ 'ಸೃಜನಶೀಲ ಗಳಿಗೆಗಳಲ್ಲಿ ಉಕ್ಕಿ ಬಂದದ್ದು ಸತ್ಯ' ಎಂಬ ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ನಂಬಿಕೆ ಅದು ಹೇಗೋ ಬೆರೆತುಹೋಯಿತು. ಆ ನಂಬಿಕೆ ಬರವಣಿಗೆ ಕುರಿತ ಮೊಗಳ್ಳಿಯ ಅಪ್ರಜ್ಞಾಪೂರ್ವಕ ಥಿಯರಿಯನ್ನು, ಬರವಣಿಗೆಯ ಧಾಟಿಯನ್ನು ನಿರ್ದೇಶಿಸಿದಂತಿದೆ. ಕವಿ ವರ್ಡ್ಸ್‌ವರ್ತ್ 'ಕಾವ್ಯವು ಶಕ್ತ ಭಾವನೆಗಳ ಸ್ವಚ್ಛಂದ ಉಕ್ಕುವಿಕೆ; ಪ್ರಶಾಂತತೆಯಲ್ಲಿ ಮರಳಿ ಮನಕ್ಕೆ ಕರೆದುಕೊಂಡ